<u>ಮೆಃ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ</u>

CC.No.809/2012
CW4/ PW6

| | |
|---|---|
| ಹೆಸರು | ಗುರುಸಿದ್ದಪ್ಪ ಪಾಟೀಲ |
| ತಂದೆ ಹೆಸರು | ಗುರುಸಿದ್ದಪ್ಪಗೌಡ |
| ವಯಸ್ಸು | 62 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಮುಧೋಳ |

ದಿನಾಂಕಃ 19-08-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.

**<u>ಮುಖ್ಯ ವಿಚಾರಣೆಃ- ಎ.ಪಿ.ಪಿ ರವರಿಂದ.</u>**

ನನಗೆ ಚಾಸಾ-1 ನನ್ನ ಹೆಂಡತಿ. ಈಗ ಸುಮಾರು 12 ವರ್ಷಗಳ ಹಿಂದೆ ನಮ್ಮ ಮನೆಯಲ್ಲಿ ಕಳ್ಳತನವಾಗಿತ್ತು. ಆ ಸಮಯದಲ್ಲಿ ನಾನು ಹೊರ್ತಿ ಗ್ರಾಮಕ್ಕೆ ಹೋಗಿದ್ದೇನು. ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ವಿಷಯನ್ನು ಚಾಸಾ-1 ರವರು ನನಗೆ ಪೋನ ಮಾಡಿ ಹೇಳಿದ ಮೇಲೆ ಗೊತ್ತಾಗಿರುತ್ತದೆ. ನಂತರ ಸಾಯಂಕಾಲ 6-00 ಗಂಟೆಗೆ ನಾನು ನಮ್ಮ ಮನೆಗೆ ಮರಳಿ ಬಂದು ನೋಡಿದಾಗ ನಮ್ಮ ಮನೆಯಲ್ಲಿಯ ಅಲೆಮೇರಾದ ಬಾಗಿಲುವನ್ನು ಮುರಿದು ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುವುದು ಕಂಡುಬಂದಿತು. ಸುಮಾರು 13 ತೋಲೆ ಬಂಗಾರದ ಆಭರಣಗಳನ್ನು ನಮ್ಮ ಮನೆಯಲ್ಲಿಂದ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿರುವುದು ಕಂಡುಬಂದಿತು. ನಂತರ ನಮಗೆ ನಮ್ಮ ವಾಹನದ ಚಾಲಕ ಸದರಿ ಕಳ್ಳತನ ಮಾಡಿರುತ್ತಾನೆ ಎಂದು ನಮಗೆ ತಿಳಿದುಬಂದಿತು. ಅವನ ಹೆಸರನ್ನು ನನಗೆ ಈಗ ಹೇಳಲು ಆಗುವುದಿಲ್ಲ. ಅವನು ಈಗ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿತನು ಆಗಿರುತ್ತಾನೆ.

**<u>ಪಾಟಿ ಸವಾಲುಃ ಆರೋಪಿ ನಂ.1 ರವರ ಪರ ಶ್ರೀ.ಎಸ್.ಐ.ಜೆ ವಕೀಲರಿಂದಃ</u>**

ನಮ್ಮ ಮನೆಯಲ್ಲಿ ಕಳ್ಳತವಾದ ಬಗ್ಗೆ ನಮಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಮ್ಮ ಮನೆಯಲ್ಲಿ ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಈ ಘಟನೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ ಈಗ ಸುಮಾರು 12 ವರ್ಷಗಳ ಹಿಂದೆ ನಮ್ಮ ಮನೆಯಲ್ಲಿ ಇದ್ದ ಸುಮಾರು 13 ತೋಲೆ ಬಂಗಾರದ ಆಭರಣಗಳನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಂ.1 ಈತನೆ ನಮ್ಮ ಮನೆಯಲ್ಲಿಯ ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾನೆ ಎಂದು ನನಗೆ ನಂತರ ತಿಳಿದು ಬಂದಿತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ</u> ಉಳಿದ ಆರೋಪಿತರ ಪರವಾಗಿ ಶ್ರೀಮತಿ ಬಿ.ಎ.ಎಮ್, ಟಿ.ಆರ್.ಎಚ್ ಮತ್ತು ಎಚ.ಕೆ. ಬಿ ವಕೀಲರು ಈ ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )
ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ